**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/167/ರೋ.ರಿ/ರಿ.ಸ್ಥಾ.ರಿ/2018-19/ನೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 21.09.2018.

## ಸುತ್ತೋಲೆ

ವಿಷಯ: ರೋಸ್ಟರ್ ರಿಜಿಸ್ಟರ್ ಮತ್ತು ರಿಕ್ತ ಸ್ಥಾನಗಳ ರಿಜಿಸ್ಟರ್‌ನ್ನು ನಿರ್ವಹಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/626/ಸೇನೆನಿ/2018 ದಿನಾಂಕ:17.09.2018.

** ** **

ಇಲಾಖಾ ವ್ಯಾಪ್ತಿಗೊಳಪಡುವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವಾಗ ಜಾರಿಯಲ್ಲಿರುವ ನೇರ ನೇಮಕಾತಿ ಮೀಸಲಾತಿಯನ್ನು ಅನುಸರಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಒದಗಿಸಿರುವ ಮೀಸಲಾತಿಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಸಂಬಂಧಪಟ್ಟ ನಮೂನೆಯಯಲ್ಲಿ ನಿಗದಿಪಡಿಸಿರುವಂತೆ ರಿಕ್ತ ಸ್ಥಾನಗಳ ರಿಜಿಸ್ಟರ್‌ನ್ನು ಕಟ್ಟುನಿಟ್ಟಾಗಿ ನಿರ್ವಹಿಸುವಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಸಂವಿಧಾನದ ಅನುಚ್ಛೇದ 371 (ಜೆ) ಅನ್ವಯವಾಗುವ ಪ್ರಕರಣಗಳಲ್ಲಿ, ಅನುಚ್ಛೇದ 371(ಜೆ)ರನ್ವಯ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದಗಳಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/230/ಸೆನೆನಿ/2015, ದಿನಾಂಕ:14.08.2015 ರನ್ವಯ ಪ್ರತ್ಯೇಕವಾಗಿ ರಿಕ್ತ ಸ್ಥಾನಗಳ/ರೋಸ್ಟರ್ ರಿಜಿಸ್ಟರ್‌ನ್ನು ಸುತ್ತೋಲೆಯೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ಕಡ್ಡಾಯವಾಗಿ ನಿರ್ವಹಿಸುವಂತೆಯೂ ಸಹ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚನೆ ನೀಡುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶಿಸಲಾಗಿದೆ.

ಅದರಂತೆ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯು ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಸಂಬಂಧಿಸಿದಂತೆ ರೋಸ್ಟರ್ ರಿಜಿಸ್ಟರ್ ಮತ್ತು ವೇಕೆನ್ಸಿ ರಿಜಿಸ್ಟರ್‌ನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗಿರುವುದು ಅವಶ್ಯವಿರುತ್ತದೆ.

ಆದ್ದರಿಂದ ಸರ್ಕಾರದ ದಿನಾಂಕ:14.08.2015ರ ಸುತ್ತೋಲೆ ಸಂಖ್ಯೆ:ಸಿಆಸುಇ/230/ಸೆನೆನಿ/2015 ನ್ನು (ನಿಗಧಿತ ನಮೂನೆಯೊಂದಿಗೆ) ಇದರೊಂದಿಗೆ ಲಗತ್ತಿಸಲಾಗಿದ್ದು, ತಮ್ಮ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಶಿಕ್ಷಣ ಮಹಾವಿದ್ಯಾಲಯಗಳು (ಬಿ.ಎಡ್ ಕಾಲೇಜುಗಳು) ಹಾಗೂ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ (ಬಿ.ಪಿ.ಎಡ್ ಕಾಲೇಜುಗಳು) ಸಂಬಂಧಿಸಿದಂತೆ ನಿಯಮಗಳನ್ವಯ ರೋಸ್ಟರ್

ರಿಜಿಸ್ಟರ್ ಮತ್ತು ವೇಕೆನ್ಸಿ ರಿಜಿಸ್ಟರ್‌ನ್ನು ಸಿದ್ಧಪಡಿಸಿ ತಪ್ಪದೇ **ದಿನಾಂಕ:10.10.2018ರೊಳಗಾಗಿ** ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಈ ರೀತಿ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವಾಗ ಸಂಬಂಧಪಟ್ಟ ಅಗತ್ಯ ಮೂಲ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ನಿಖರ ಮಾಹಿತಿ/ವಿವರಗಳೊಂದಿಗೆ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವುದು. ಒಂದು ವೇಳೆ ನಿಯಮಗಳನ್ವಯ ಪರಿಶೀಲಿಸದೇ ಸಂಬಂಧಪಟ್ಟ ರಿಜಿಸ್ಟರ್‌ಗಳನ್ನು ತಪ್ಪು ಅಥವಾ ವ್ಯತ್ಯಾಸದ ಮಾಹಿತಿ/ವಿವರಗಳೊಂದಿಗೆ ಸಿದ್ಧಪಡಿಸಿ ಇಲಾಖೆಗೆ ಸಲ್ಲಿಸಿದಲ್ಲಿ ಹಾಗೂ ಇದರಿಂದ ಮುಂದೆ ಏನಾದರೂ ಅಸಂಗತತೆ ಉದ್ಭವಿಸಿದಲ್ಲಿ ಇದಕ್ಕೆ ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯೇ ನೇರ ಹೊಣೆಗಾರಿಕೆಯಾಗಿರುತ್ತದೆ.

**ಕಾಲೇಜು ಶಿಕ್ಷಣ ಆಯುಕ್ತರು**

**ಇವರಿಗೆ:**

(1) ಇಲಾಖಾ ವ್ಯಾಪ್ತಿಗೊಳಪಡುವ ಎಲ್ಲಾ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಬಿ.ಎಡ್ ಕಾಲೇಜುಗಳು ಹಾಗೂ ಬಿ.ಪಿ.ಎಡ್ ಕಾಲೇಜುಗಳ ಆಡಳಿತ ಮಂಡಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(2) ಇಲಾಖಾ ವ್ಯಾಪ್ತಿಗೊಳಪಡುವ ಎಲ್ಲಾ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಕಾನೂನು ಕಾಲೇಜುಗಳು, ಬಿ.ಎಡ್ ಕಾಲೇಜುಗಳು ಹಾಗೂ ಬಿ.ಪಿ.ಎಡ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಮಂಗಳೂರು ಮತ್ತು ಕಲಬುರಗಿ–ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಆಡಳಿತ ಮಂಡಳಿಗಳು ತಮ್ಮ ಕಛೇರಿಗೆ ಸಲ್ಲಿಸುವ ರಿಜಿಸ್ಟರ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಮಾಹಿತಿ/ವಿವರಗಳು ನಿಯಮಾನುಸಾರವಾಗಿದ್ದಲ್ಲಿ ತಮ್ಮ ಅಭಿಪ್ರಾಯದೊಂದಿಗೆ **ತಪ್ಪದೇ ದಿನಾಂಕ:20.10.2018ರೊಳಗಾಗಿ (excel format** ನಲ್ಲಿ **–ಹಾರ್ಡ್ ಮತ್ತು ಸಾಫ್ಟ್ ಕಾಪಿಗಳಲ್ಲಿ–email ID-dcenemakati@gmail.com)** ಈ ಕಛೇರಿಗೆ ದ್ವಿಪ್ರತಿಯಲ್ಲಿ ವರದಿ ನೀಡುವುದು. ಒಂದು ವೇಳೆ ಸಂಬಂಧಪಟ್ಟ ಮಾಹಿತಿ/ವಿವರಗಳು ನಿಯಮಾನುಸಾರವಾಗಿಲ್ಲದಿದ್ದಲ್ಲಿ ತಮ್ಮ ಕಛೇರಿ ಹಂತದಲ್ಲೇ ಹಿಂದಿರುಗಿಸಿ ಆಡಳಿತ ಮಂಡಳಿಗೆ ಸೂಕ್ತ ನಿರ್ದೇಶನ ನೀಡುವುದು.
2) ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು–ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.
3) ಅಧೀಕ್ಷಕರು, ನೇಮಕಾತಿ ವಿಭಾಗ–2 (ಬೆಂಗಳೂರು ನಗರ, ಮೈಸೂರು ಮತ್ತು ಮಂಗಳೂರು ವಿಭಾಗ)–ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಅಧೀಕ್ಷಕರು, ನೇಮಕಾತಿ ವಿಭಾಗ–2 (ಬೆಂಗಳೂರು ಗ್ರಾಮಾಂತರ ಮತ್ತು ಧಾರವಾಡ ವಿಭಾಗ)– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
5) ಅಧೀಕ್ಷಕರು, ನೇಮಕಾತಿ ವಿಭಾಗ–2 (ಕಲಬುರಗಿ ಮತ್ತು ಶಿವಮೊಗ್ಗ ವಿಭಾಗ)– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6) ಹೆಚ್ಚುವರಿ ಪ್ರತಿ.
7) ಕಛೇರಿ ಪ್ರತಿ.

**VACANCY REGISTER**

Designation of Appointing Authority

Percentage of vacancies required to be filled by

Direct Recruitment/ Promotion/Deputation

| Sl. No. | Date of Occurance | Whether required to be filled by Direct Recruitment/ Promotion/ Deputation | Classification of DR vacancy (SC/ST/BCM/ BCT/BT/BSG/UR) | Date of Notifying vacancy to selecting Authority | Classification of PR Vacancy (SC/ST/UR) | Date of filling up | Whether filled by Direct Recruitment/ Promotion/ Deputation | Whether Candidate appointed is SC/ST/BCM/BCT/ BT/BSG/GM | Reasons for deviation, if any from the classification |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

Sd/-
President/Secretary

**ಕಛೇರಿಯ ಹೆಸರು**

**ಇಲಾಖೆ**

| | |
|---|---|
| ಇಲಾಖೆ | |
| ಕಛೇರಿಯ ಹೆಸರು | |
| ಹುದ್ದೆ | |
| ವೃಂದ | |
| ವೇತನ ಶ್ರೇಣಿ | |
| ಮಂಜೂರಾದ ವೃಂದ ಬಲ | |
| ಮುಂಬಡ್ತಿಗೆ | |
| ನೇಮಕಾತಿ ಪ್ರಾಧಿಕಾರ | |

ರಿಕ್ತ ಸ್ಥಾನಗಳ/ರೋಸ್ಟರ್ ರಿಜಿಸ್ಟರ್

| ಕ್ರಮ ಸಂಖ್ಯೆ | ಆಯ್ಕೆ ಪ್ರಾಧಿಕಾರದ ಹೆಸರು | ಆಯ್ಕೆ ಪ್ರಾಧಿಕಾರಕ್ಕೆ ಹುದ್ದೆಯ ಬಗ್ಗೆ ವರದಿ ನೀಡಿದ ದಿನಾಂಕ | ಒಟ್ಟು ಖಾಲಿ ಹುದ್ದೆಗಳು | ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ | ನೇಮಕಾತಿ ಅಧಿಸೂಚನೆ/ ಆದೇಶ ಸಂಖ್ಯೆ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ | ಕ್ರಮ ಸಂಖ್ಯೆ | ಆವೃತ್ತಿ ಸಂಖ್ಯೆ | ರೋಸ್ಟರ್ ಬಿಂದು | ನೇರ ಮೀಸಲಾತಿ | ಸಮತಳ ಮೀಸಲಾತಿ | ಅಧಿಕಾರಿಯ ಹೆಸರು | ಕೆಪಿಎಸ್‌ಸಿ ಆಯ್ಕೆಯ ಕ್ರಮ ಸಂಖ್ಯೆ | | ಸಾಮಾನ್ಯ ಅಥವಾ | ಮೀಸಲಾತಿ ಯನ್ನು ನೀಡದಿರಲು ಕಾರಣ | ಷರಾ |
|---|---|---|---|---|---|---|---|---|---|---|---|---|---|---|---|---|---|
| | | | | ಸಂಖ್ಯೆ/ ದಿನಾಂಕ | ಸಂಖ್ಯೆ/ ದಿನಾಂಕ | | | | | ಸಾಮಾನ್ಯ/ ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB | ಇತರೆ/ ಮಹಿಳೆ/ ಅಂಗವಿಕಲ/ ಮಾಜಿ ಸೈನಿಕ/ ಕನ್ನಡ ಮಾಧ್ಯಮ/ ಗ್ರಾಮೀಣ ಅಭ್ಯರ್ಥಿ/ ಯೋಜನಾ ನಿರಾಶ್ರಿತರು | | | ಸಾಮಾನ್ಯ/ ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB | ಎಸ್‌ಸಿ/ ಎಸ್‌ಟಿ/ ಪ್ರವರ್ಗ-I/ ಪ್ರವರ್ಗ-IIA/ ಪ್ರವರ್ಗ-IIB/ ಪ್ರವರ್ಗ-IIIA/ ಪ್ರವರ್ಗ-IIIB ಗಳಿಂದ ಭರ್ತಿ ಮಾಡಲಾಗಿದೆಯೇ? | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |

ಸಹಿ/-
ಅಧ್ಯಕ್ಷರು/ಕಾರ್ಯದರ್ಶಿಗಳು